ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Wednesday, 29th November 1972/*Margasira* 8, 1894 *S.E.*

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(*to which oral answers were given*)

STORES PURCHASE COMMITTEE OF HEALTH DEPARTMENT.

6. Sri S. BANGARAPPA (Sorab) :—

Will the Minister for Health be pleased to state :—

(*a*) whether there is a Committee called "Store Purchase Committee" in the Health Department, if so, the names of the Chairman and the members of the Committee and what are its powers ;

(*b*) whether any complaints have been received by Government that it is favouring only some parties ;

(*c*) if so, the action the Government proposes to take against the persons responsible ?

Sri H. SIDDAVEERAPPA (Minister for Health) :—

(*a*) There is no "Store Purchase Committee" as such in the Directorate of Health and Family Planning Services, Bangalore.

(*b*) and (*c*) The question does not arise in view of the answer to (*a*) above.

ಶ್ರೀ ಎಸ್. ಬಂಗಾರಪ್ಪ.—ನನ್ನ ಪ್ರಶ್ನೆಗೆ ಉತ್ತರವಾಗಿ ಸ್ಟೋರ್ಸ್ ಪರ್ಚೇಸ್ ಕಮಿಟಿ ಎಂಬ ಸಮಿತಿ ಇರುವುದಿಲ್ಲ ಎಂದು ತಿಳಿಸಿದೆ. ಕೊನೆಯ ಪಕ್ಷ ಡಿ. ಎಚ್. ಎಸ್. ರವರ ಆಫೀಸಿಗೆ ಸೇರಿದ ಹಾಗೆ ಬೇಕಾದ ಔಷಧಿ ಮುಂತಾದವನ್ನು ಖರೀದಿ ಮಾಡಲು ಯಾವುದಾದರೂ ಸಮಿತಿಯಿದೆಯೇ ? ಇದ್ದರೆ ಅದು ಎಷ್ಟು ವರ್ಷದಿಂದಿದೆ ? ಅದರ ಅಧ್ಯಕ್ಷರು ಮತ್ತು ಸದಸ್ಯರು ಯಾರು ?

ಶ್ರೀ ಎಚ್. ಸಿದ್ದವೀರಪ್ಪ.—ಸ್ಪೋರ್ಟ್ಸ್ ಪರ್ಚೇಸ್ ಕಮಿಟಿಗೆ ಅಡ್ವೈಜ್ ಮಾಡಲು ಬೇಕಾದಷ್ಟು ಸಮಿತಿಗಳಿದ್ದವು. ಈಗ ಒಂದು ಕ್ಯಾಬಿನೆಟ್ ತೀರ್ಮಾನವಾಗಿದೆ. ಅದರ ಪ್ರಕಾರ ಸ್ಪೋರ್ಟ್ಸ್ ಪರ್ಚೇಸ್ ಕಮಿಟಿ ಮೆಡಿಕರ್ ಇಲಾಖೆಗೆ ಬೇಕಾದ್ದನ್ನು ಕೊಳ್ಳಬೇಕಾದ್ದಿಲ್ಲ, ಅದು ಕೊಳ್ಳಲು ನಿಧಾನವಾಗುವುದು. ಆದುದರಿಂದ ಬೇರೆ ಸಮಿತಿ ಮಾಡಿ ಅದರ ಮೂಲಕ ಖರೀದಿ ಮಾಡಬೇಕು ಎಂದು ಕ್ಯಾಬಿನೆಟ್ ತೀರ್ಮಾನವಾಗಿದೆ. ಅದರ ಪ್ರಕಾರ ಎಷ್ಟು ಜನ ಆ ಸಮಿತಿಯಲ್ಲಿರಬೇಕು ಎಂಬುದು ಇನ್ನೂ ನಿರ್ಧಾರಮಾಡಿಲ್ಲ. ಅದರ ಕಡೆ ಈಗ ಗಮನ ಕೊಡುತ್ತಿದ್ದಾರೆ. My idea is to appoint a committee with the Secretary, Health Department as the Chairman, and Secretary Commerce and Industries Department, some other senior Secretaries and the Director of Health Services as members for the purchase of hospital necessities in the State.

ಶ್ರೀ ಎಸ್. ಬಂಗಾರಪ್ಪ.—ಹಿಂದಿದ್ದ ಸಮಿತಿಗಳಲ್ಲಿ ರಾಜ್ಯದಲ್ಲಿ ಔಷಧಿ ತಯಾರಿಸುವ ಸಂಸ್ಥೆಗಳ ಅದರಲ್ಲೂ ದೊಡ್ಡದೊಡ್ಡ ಸಂಸ್ಥೆಗಳ ಕೆಲವು ಮಂದಿ ಮಾರವಾಡಿಗಳು, ಕೋಟ್ಯಾಧೀಶ್ವರರು ಇದ್ದುದರಿಂದ ಅವರ ಸಂಸ್ಥೆಗಳಿಂದಲೇ ಹೆಚ್ಚಾಗಿ ಔಷಧಿಗಳನ್ನು ಖರೀದಿ ಮಾಡುತ್ತಿದ್ದರು. ಈ ಬಗ್ಗೆ ಕೆಲವರು ಸಂಸ್ಥೆಗಳವರು ದೂರನ್ನು ಸಲ್ಲಿಸಿದರು. ಹಾಗೆ ದೂರುಗಳು ಬಂದಿರುವುದು ನಿಜವೇ? ಬಂದಿದ್ದರೆ ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಕೆಲವು ಫಿರ್ಯಾದುಗಳು ಬಂದಿವೆ. ಎಸ್. ಪಿ. ಡಿ. ಯಲ್ಲಿ ಕೆಲವರ ಕೈವಾಡವಿದೆ ಎಂದು ದೂರುಗಳು ಬಂದಿದ್ದುವು. ಅದರ ಬಗ್ಗೆ ಗಮನಿಸಿ ಅದು ಸರಿಯಲ್ಲ, ಇದಕ್ಕಾಗಿ ಒಂದು ಬೇರೆ ಸಮಿತಿ ಮಾಡಬೇಕು ಎಂದು ಸರಕಾರ ತೀರ್ಮಾನ ಮಾಡಿದೆ.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ಎಷ್ಟೋ ಆಸ್ಪತ್ರೆಗಳಲ್ಲಿ ಔಷಧಿಗಳಿಲ್ಲದೆ ತೊಂದರೆಯಾಗಿರುವುದಕ್ಕೆ ಎಸ್. ಪಿ. ಸಿ. ರಚನೆಯಾಗದಿರುವುದು ಕಾರಣವೇ ಅಥವಾ ಅದು ಸರಿಯಾಗಿ ಕೆಲಸ ಮಾಡದಿರುವುದು ಕಾರಣವೇ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ರೇಟ್ ಕಾಂಟ್ರಾಕ್ಟ್ ಪದ್ಧತಿ ಏನಿದೆ ಅದರ ಪ್ರಕಾರ ಕೊಂಡುಕೊಳ್ಳಬಾರದು ಎಂದು ತೀರ್ಮಾನಿಸಿ ಆಗಸ್ಟ್‌ನಿಂದ ಯಾವುದನ್ನೂ ಕೊಂಡಿಲ್ಲ. ಈ ವರ್ಷದಲ್ಲಿ ಬಹುಶಃ ಇನ್ನೊಂದು ವಾರದಲ್ಲಿ ಔಷಧಿಗಳ ಸ್ಟಾಕನ್ನು ನೋಡಿ ಬೇಕಾದ್ದನ್ನು ಕೊಳ್ಳಬೇಕು ಎಂದು ತೀರ್ಮಾನವಾಗಿದೆ. ಇದುವರೆಗೆ ಕೊಳ್ಳದಿರಲು ಕಾರಣ ಬೇಕಾದಷ್ಟು ಔಷಧಿಗಳ ಸ್ಟಾಕ್ ಇತ್ತು. ಈಗ ಔಷಧಿಗಳಿಲ್ಲ. ಅವನ್ನು ಕೊಳ್ಳಲು ಸಂಬಂಧಪಟ್ಟ ಸಮಿತಿ ಸೂಕ್ತ ಕಾರ್ಯಕ್ರಮ ಕೈಗೊಳ್ಳುವುದು.

ಶ್ರೀ ಕೆ. ಎಚ್. ಹನುಮೇಗೌಡ.—ರೇಟ್ ಕಾಂಟ್ರಾಕ್ಟ್ ಸಿಸ್ಟಂ ಪ್ರಕಾರ ಮತ್ತು ಟೆಂಡರ್ ಮೂಲಕ ಕೊಳ್ಳುತ್ತಿರುವುದರಿಂದ ಗ್ರಾಮಾಂತರಗಳಿಗೆ ಔಷಧಿ ಸರಿಯಾಗಿ ಸರಬರಾಜಾಗುತ್ತಿಲ್ಲ. ಒಂದು ರೂಪಾಯಿಗೆ 120 ಪರ್ಸೆಂಟಿಯಂತೆ ದೊರೆಯುವ ಕೆಲವು ಸುಲಭ ಬೆಲೆ ಔಷಧಿಗಳನ್ನು ಈಗ ಸರಬರಾಯಿ ಮಾಡುತ್ತಿದ್ದಾರೆ. ಇದರಿಂದ ಒಳ್ಳೆಯ ಪರಿಣಾಮವಾಗುತ್ತಿಲ್ಲ.

ಅಧ್ಯಕ್ಷರು.—ಅದಕ್ಕಾಗಲೇ ಉತ್ತರ ಹೇಳಿದ್ದಾರೆ.

HOUSES CONSTRUCTED BY C.I.T.B., BANGALORE

21. Sri T. R. SHAMANNA (Fort).—

Will the Minister for Municipal Administration be pleased to state:—

(*a*) whether it is a fact that about 100 cheap houses at Survey No. 1 to 72 at Gavipuram Division No. 30 were constructed by the City Improvement Trust Board in the year 1961 and allotted to the low paid Government officials:

(*b*) if so, whether electric connection has been given to these houses as provided in the estimate,